# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 494(520)**
**ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)**
**ಉತ್ತರಿಸುವ ದಿನಾಂಕ : 11.12.2025**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೃಷ್ಣ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಗ್ರಾಮಗಳಿಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಒದಗಿಸಲು ಇರುವ ಯೋಜನೆಗಳಾವುವು; (ವಿವರ ನೀಡುವುದು) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2ರ ಯೋಜನೆಯ ಅನುಷ್ಠಾನದಿಂದ 176 ಗ್ರಾಮಗಳು ಬಾದಿತವಾಗಿದ್ದು, ಈ ಗ್ರಾಮಗಳ ಪುನಶ್ಚೇತನಕ್ಕಾಗಿ 136 ಪುನರ್‌ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ 104 ಪುನರ್‌ವಸತಿ ಕೇಂದ್ರಗಳನ್ನು ಆಯಾ ಗ್ರಾಮಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ. ಇನ್ನೂ ಉಳಿದ 2 (ಕಲಾದಗಿ & ಯಡಹಳ್ಳಿ (ಜಿ)) ಪುನರ್‌ವಸತಿ ಕೇಂದ್ರಗಳನ್ನು ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸುವ ಪ್ರಕ್ರಿಯೆ ಜಾರಿಯಲ್ಲಿದೆ.<br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಮುಳುಗಡೆ ಹೊಂದುವ 20 ಗ್ರಾಮಗಳಲ್ಲಿನ ಸಂತ್ರಸ್ಥರು (ನಿರಾಶ್ರಿತರು) ಗಳಿಗೆ 24 ಪುನರ್ವಸತಿ ಕೇಂದ್ರಗಳನ್ನು ಗುರುತಿಸಲಾಗಿದ್ದು, ನಿಯಮಾವಳಿಯಂತೆ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳು ವಿವಿದ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. |
| (ಆ) | ಎಫ್.ಆರ್.ಎಲ್ 519.6 ರಿಂದ 524 ರ ವರೆಗೆ ಡ್ಯಾಂನ ಮಟ್ಟವನ್ನು ಎತ್ತರಿಸಿದಾಗ ಮುಳುಗಡೆಯಾಗುವ ಗ್ರಾಮಗಳ ಸಂಖ್ಯೆ ಎಷ್ಟು; (ಗ್ರಾಮವಾರು ಮಾಹಿತಿ ನೀಡುವುದು) | ಮುಳುಗಡೆಯಾಗುವ 20 ಗ್ರಾಮದ ಸಂತ್ರಸ್ತರಿಗೆ ಪುನರ್ ವಸತಿ, ಪುನರ್‌ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಕಾಮಗಾರಿಗಳು ವಿವಿದ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| (ಇ) | ಮುಳುಗಡೆಯಾಗುವ ಗ್ರಾಮದ ಸಂತ್ರಸ್ತರಿಗೆ ಪುನರ್ ವಸತಿ, ಪುನರ್ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಸರ್ಕಾರ ಯೋಜನೆ ರೂಪಿಸಿದೆಯೇ: ಅವು ಯಾವುವು; | |
| (ಈ) | ಅಂತಹ ಗ್ರಾಮಗಳಿಗೆ ಪನರ್ ವಸತಿ, ಪುನರ್ ನಿರ್ಮಾಣ ಕೈಗೊಳ್ಳಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ವಿವರಿಸುವುದು: (ವಿವರ ನೀಡುವುದು) | |
| (ಉ) | ಸಂತ್ರಸ್ತರಿಗೆ ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಿ ನಿವೇಶನ ಹಂಚಿಕೆ ಮಾಡದೆ ಅದರ ಬದಲಾಗಿ ಪ್ಯಾಕೇಜ್ ನೀಡಲಾಗುವುದೆಂದು ಸರ್ಕಾರ ಘೋಷಣೆ ಮಾಡಿದೆಯೇ: ಹಾಗಿದ್ದಲ್ಲಿ, ಆ ಪ್ಯಾಕೇಜ್ ಯಾವ ಹಂತದಲ್ಲಿವೆ? (ವಿವರ ನೀಡುವುದು) | ಸರ್ಕಾರದ ಆದೇಶ ದಿನಾಂಕ:09.10.2025ರನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪರ್ಯಾಯ ನೀತಿಯನ್ನು ರೂಪಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

ಸಂಖ್ಯೆ: ಜಸಂಇ 96 ಡಬ್ಲ್ಯೂಬಿಎಂ 2025

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 494 (520)ಕ್ಕೆ ಅನುಬಂಧ.

ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರಡಿ ಬಾಧಿತಗೊಳಗಾಗುವ ಗ್ರಾಮಗಳ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಯ ವಿವರಗಳು.

| ಕ್ರ. ಸಂ | ಮುಳುಗಡೆ ಯಾಗುವ ಗ್ರಾಮಗಳ ಹೆಸರು | ಪುನರ್ವಸತಿ ಕೇಂದ್ರದ ಹೆಸರು | ಕ್ಷೇತ್ರ ಎ-ಗುಂ | ಪುನರ್ವಸತಿ ಕೇಂದ್ರಗಳ ಪ್ರಸ್ತುತ ಹಂತ |
|---|---|---|---|---|
| 1 | ಚಿಕ್ಕಗಲಗಲಿ | ಚಿಕ್ಕ-ಗಲಗಲಿ ಮಹಾಲಭಾಗಾಯತ್ | 212ಎ-24ಗು | 03 ಪುನರ್ವಸತಿ ಕೇಂದ್ರಗಳಲ್ಲಿ ಆಂತರಿಕ ರಸ್ತೆಗಳ ಖಡೀಕರಣ, ಬದಿ ಚರಂಡಿ, ಅಡ್ಡ ಚರಂಡಿ, ಸಾರ್ವಜನಿಕ ಕಟ್ಟಡಗಳು, ಮೇಲ್ಮಟ್ಟದ ಜಲಸಂಗ್ರಹಾಲಯ ಹಾಗೂ ವಿತರಣಾ ಜಾಲದ ಕಾಮಗಾರಿಗಳು ಪ್ರಗತಿಯಲ್ಲಿವೆ |
| | | ಶಿರಬೂರ ಭಾಗ ಮತ್ತು ಚಿಕ್ಕಗಲಗಲಿ ಭಾಗ (ಜುಂಜರಕೊಪ್ಪ) | 174ಎ-02ಗು | |
| 2 | ಶಿರಬೂರ | ಶಿರಬೂರ (ಮಹಾಲಭಾಗಾಯತ್) | 115ಎ-25ಗು | |
| 3 | ಬಾವಲತ್ತಿ | ಬಾವಲತ್ತಿ | 149ಎ-35ಗು | 07 ಪುನರ್ವಸತಿ ಕೇಂದ್ರಗಳಲ್ಲಿ ಲೇಔಟ ನಕ್ಷೆ ಅನುಮೋದನೆಯಾಗಿದ್ದು, ಇವುಗಳಲ್ಲಿ ಅಂಕಲಗಿ, ಉದಗಟ್ಟಿ, ಕೊಪ್ಪ ಎಸ್.ಕೆ, ಚಿಕ್ಕೂರು ಹಾಗೂ ಮಾಚಕನೂರ (ವಜ್ರಮಟ್ಟಿ) ಪುನರ್ವಸತಿ ಕೇಂದ್ರಗಳಲ್ಲಿ ನಿವೇಶನ ಗುರುತಿಸುವುದು, ಆಂತರಿಕ ರಸ್ತೆಗಳಿಗೆ ಬದಿಚರಂಡಿ, ಅಡ್ಡಚರಂಡಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಕುಂದರಗಿ ಹಾಗೂ ಬಾವಲತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. |
| 4 | ಉದಗಟ್ಟಿ | ಉದಗಟ್ಟಿ | 183ಎ-00 ಗು | |
| 5 | ಕುಂದರಗಿ | ಕುಂದರಗಿ | 348ಎ-05 ಗು | |
| 6 | ಕೊಪ್ಪ ಎಸ್. ಕೆ. | ಕೊಪ್ಪ ಎಸ್. ಕೆ. | 184ಎ-02 ಗು | |
| 7 | ಅಂಕಲಗಿ | ಅಂಕಲಗಿ | 134ಎ-07 ಗು | |
| 8 | ಚಿಕ್ಕೂರ | ಚಿಕ್ಕೂರ | 217ಎ-23 ಗು | |
| 9 | ಸನಾಳ | ಮಾಚಕನೂರ (ವಜ್ರಮಟ್ಟಿ) | 98ಎ-26 ಗು | |
| | | ಮಾಚಕನೂರ (ಜುಂಜರಕೊಪ್ಪ) | 132ಎ-14 ಗು | 01 ಪುನರ್ವಸತಿ ಕೇಂದ್ರದ ಲೇಔಟ ನಕ್ಷೆ ತಯಾರಿಕೆ ಹಂತದಲ್ಲಿದೆ. |
| 10 | ಸನಾಳ | ಸನಾಳ | 164ಎ-09 ಗು | 01 ಪುನರ್ವಸತಿ ಕೇಂದ್ರದ 19(1) ಅಧಿಸೂಚನೆ ಪ್ರಕಟಗೊಂಡಿದೆ. |
| 11 | ಬುದ್ನಿ. ಬಿ.ಕೆ. | ಬುದ್ನಿ. ಬಿ.ಕೆ. | 99ಎ-01 ಗು | 02 ಪುನರ್ವಸತಿ ಕೇಂದ್ರಗಳಿಗೆ ಜಮೀನು ಭೂಸ್ವಾಧೀನ ಐತೀರ್ಪು ಹಂತದಲ್ಲಿವೆ. |
| 12 | ಬಂಟನೂರ | ಬಂಟನೂರ | 343ಎ-21 ಗು | |
| 13 | ಆಲಗುಂಡಿ. ಬಿ.ಕೆ. | ಆಲಗುಂಡಿ. ಬಿ.ಕೆ. (ಜುಂಜರಕೊಪ್ಪ) | 156ಎ-03 ಗು | 02 ಪುನರ್ವಸತಿ ಕೇಂದ್ರಗಳಲ್ಲಿ ಸಹಮೋಜನೆ ಕಾರ್ಯ ಪೂರ್ಣಗೊಂಡಿದೆ |
| | | ಆಲಗುಂಡಿ. ಬಿ.ಕೆ. (ಆಲಗುಂಡಿ ಬಿ.ಕೆ. ಭಾಗ) | 90ಎ-38 ಗು | |
| 14 | ವಂದಾಲ | ವಂದಾಲ | 545ಎ-00 ಗು | 05 ಪುನರ್ವಸತಿ ಕೇಂದ್ರಗಳಲ್ಲಿ ಸಹಮೋಜನೆ ಕಾರ್ಯ ಪ್ರಗತಿಯಲ್ಲಿದೆ. |
| 15 | ಹಿರೇಪಡಸಲಗಿ | ಹಿರೇಪಡಸಲಗಿ (ತೊದಲಬಾಗಿ ಭಾಗ) | 263ಎ-00 ಗು | |
| | | ಹಿರೇಪಡಸಲಗಿ (ಸಾವಳಗಿ ಭಾಗ) | 242ಎ-05 ಗು | |
| 16 | ಕುಂಬಾರಹಳ್ಳ | ಕುಂಬಾರಹಳ್ಳ | 376ಎ-20 ಗು | |
| 17 | ಕಾತರಕಿ | ಕಾತರಕಿ | 200ಎ-36 ಗು | |
| 18 | ಗೋವಿಂದಕೊಪ್ಪ | ಗೋವಿಂದಕೊಪ್ಪ | 96ಎ-16 ಗು | 02 ಜೆ.ಎಂ.ಸಿ. ಕಾರ್ಯಕ್ಕೆ ಭೂಮಾಲೀಕರು ಅಡ್ಡಿಪಡಿಸಿರುತ್ತಾರೆ. |
| 19 | ಹಿರೇಸಂಶಿ | ಹಿರೇಸಂಶಿ | 105ಎ-39 ಗು | |
| 20 | ಗದ್ದನಕೇರಿ | ಕೈಬಿಡಲಾಗಿದೆ | ಕೈಬಿಡಲಾಗಿದೆ | 01 ಗದ್ದನಕೇರಿ ಗ್ರಾಮವನ್ನು ಪುನರ್‌ವಸತಿಗೊಳಿಸುವ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ. |
| | | | **4632ಎ-39 ಗು** | |